ಸಾಕ್ಷಿಯನ್ನು ದಿನಾಂಕಃ **03-07-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃ ಶ್ರೀ. ಎಂ ಎಸ್ ಬಿ., ವಕೀಲರಿಂದಃ**

1 ಮತ್ತು 2 ನೇ ಪ್ರತಿವಾದಿಯರು ಹಾಗೂ ವಾದಿಯರು ನೀಲಕೋಡ ಗ್ರಾಮದವರು. 1 ನೇ ಪ್ರತಿವಾದಿ ನನ್ನ ಗಂಡ. ಅವರು ಈಗಿಲ್ಲ. ಸುಬ್ಬ ಮಂಜ ಹೆಗಡೆ ಅವರು ನಮ್ಮ ನೆರೆ ಮನೆಯವರು. ನನ್ನ ಗಂಡನ ಪರವಾಗಿ ಈ ದಾವೆಯಲ್ಲಿ ಮೊದಲು ರವಿ ಹೆಗಡೆ ವಕೀಲರಿದ್ದರು, ಅವರು ಈಗ ತೀರಿಕೊಂಡಿದ್ದಾರೆ. ನಾನು ಅವರ ಕಚೇರಿಗೆ ಹೋಗಿದ್ದು ಇಲ್ಲ. ರವಿ ಹೆಗಡೆ ವಕೀಲರಿಗೆ ಪ್ರತಿವಾದ ಪತ್ರ ಬರೆಯಲು ಯಾರು ಮಾಹಿತಿ ಕೊಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ನನಗೆ ಈ ದಾವೆಯ ಬಗ್ಗೆ ಈಗಿನ ವಕೀಲರು ಮಾಹಿತಿ ಕೊಟ್ಟರು. ಸಾಕ್ಷಿ ಜವಾಬಿನ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನನ್ನ ತಮ್ಮ ಕಾಶೀನಾಥ ರವರು ಮಾಹಿತಿ ಕೊಟ್ಟಿದ್ದರು. ನನಗೆ ಈ ದಾವಾ ರಸ್ತೆಯ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

2. ನೀಲಕೋಡ ಗ್ರಾಮದ ಸ.ನಂ. 135 ಇದು ವಾದಿಯ ಮಾಲ್ಕಿ ಹಕ್ಕಿನ ಜಾಗ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 135/1 ಯಾರಿಗೆ ಸಂಬಂಧಪಟ್ಟ ಜಾಗ ಎಂದು ನನಗೆ ನೆನಪಿಲ್ಲ. ನೀಲಕೋಡ ಗ್ರಾಮದಲ್ಲಿ ವಾದಿಯ ಜಾಗ ಇರುವುದಿಲ್ಲ. ನೀಲಕೋಡ ಗ್ರಾಮದಲ್ಲಿ ವಾದಿಗೆ ಮನೆ ಇರುವುದಿಲ್ಲ. ನೀಲಕೋಡ ಗ್ರಾಮದಲ್ಲಿ ಸ.ನಂ. 135/1 ಇದೆಯೋ ಎಂದರೆ ನನಗೆ ನೆನಪಿಲ್ಲ. ನೀಲಕೋಡ ಗ್ರಾಮದ ಸ.ನಂ.135 ನಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಸರ್ವೆ ನಂಬರ್ ಅಲ್ಲ ಎಂದರೆ ಸರಿ. ಸ.ನಂ.135 ವಾದಿಯ ಮಾಲ್ಕಿ ಹಕ್ಕಿನ ಸ್ಥಳವಾಗಿದ್ದು, ಅದರ ರಕ್ಷಣೆಗಾಗಿ ವಾದಿಯು ಈ ದಾವೆಯನ್ನು ಹೂಡಿದ್ದಾರೆ ಎಂದರೆ ಸಾಕ್ಷಿಯು ಅವರು ಯಾಕೆ ಈ ದಾವೆ ಹೂಡಿದ್ದಾರೆ ಎಂದು ನನಗೆ ತಿಳಿದಿಲ್ಲ ಎಂದು ನುಡಿದಿರುತ್ತಾರೆ. ಈ ಸರ್ವೆ ಸಂಖ್ಯೆಯ ಪಶ್ಚಿಮ ದಿಕ್ಕಿಗೆ ಬಂಗಾರಮಕ್ಕಿಯಿಂದ ಕೇರಿಮಕ್ಕಿಗೆ ಹೋಗುವ ಸಾರ್ವಜನಿಕರ ರಸ್ತೆ ಇದೆ ಎಂದರೆ ಸರಿ. ಅದು ಮಣ್ಣಿನ ರಸ್ತೆ ಆಗಿರುತ್ತದೆ. ಆ ರಸ್ತೆ ಮುಂದುವರೆದು ಕೋಳಿಬೋಳೆ ಸ್ಥಳದ ಮೂಲಕ ಹಾದು ಹೋಗಿದೆ. ದಾವಾ ಸ್ಥಳದ ಪಶ್ಚಿಮಕ್ಕೆ ಉತ್ತರ-ದಕ್ಷಿಣವಾಗಿ ಮಳೆಗಾಲದಲ್ಲಿ ನೀರು ಹೋಗುವ ಕಾಲುವೆ ಇದೆ ಎಂದರೆ ಸರಿಯಲ್ಲ, ದೊಡ್ಡ ಹಳ್ಳ ಇದೆ ಎಂದು ನುಡಿದಿರುತ್ತಾರೆ. ಈ ಬಂಗಾರಮಕ್ಕಿಯಿಂದ ಕೇರಿಮಕ್ಕಿಗೆ ಹೋಗುವ ರಸ್ತೆಗೆ ತಾಗಿಯೇ ಈ ಹಳ್ಳ ಇರುವುದಿಲ್ಲ, ಸ್ವಲ್ಪ ದೂರದಲ್ಲಿ ಇದೆ. ಈ ಹಳ್ಳಕ್ಕೆ ಅಥವಾ ರಸ್ತೆಗೆ ತಾಗಿ ವಾದಿಯ ಸ್ಥಳ ಇರುವುದಿಲ್ಲ. ಬಂಗಾರಮಕ್ಕಿಯಿಂದ ಕೇರಿಮಕ್ಕಿಗೆ ಹೋಗುವ ರಸ್ತೆಯ ಸುತ್ತಲೂ ಅರಣ್ಯ ಇಲಾಖೆಯ ಜಾಗ ಇದೆ. ಈ ಅರಣ್ಯ ಇಲಾಖೆಯ ಜಾಗವು ಹಳ್ಳದ ಕಡೆಗೆ ಇಳಿಜಾರಾಗಿದೆ. ಮಳೆಗಾಲದಲ್ಲಿ ಗುಡ್ಡದಿಂದ ಬಂದ ನೀರು ಈ ಹಳ್ಳಕ್ಕೆ ಹರಿದು ಹೋಗುತ್ತದೆ. ನಮ್ಮ ಮನೆ ಸ.ನಂ.187 ರಲ್ಲಿ ಇದೆ. 2 ನೇ ಪ್ರತಿವಾದಿಯವರ ಮನೆ ಯಾವ ಸ.ನಂ. ನಲ್ಲಿ ಬರುತ್ತದೆ ಎಂದು ಗೊತ್ತಿಲ್ಲ. 2 ನೇ ಪ್ರತಿವಾದಿಗೆ ಸೇರಿದ ಜಾಗವು ನಮ್ಮ ಮನೆಯ ಹತ್ತಿರ ಇದೆ. ಯಾವ ಸರ್ವೆ ಸಂಖ್ಯೆ, ಕ್ಷೇತ್ರ ಗೊತ್ತಿಲ್ಲ. ನಮಗೆ 30 ಗುಂಟೆ ಜಾಗ ಇದೆ. ನೀಲಕೋಡ ಗ್ರಾಮದ ಸ.ನಂ.136/4, 136/5

ಮತ್ತು 136/6 ವಾದಿಗೆ ಸೇರಿದ ಸ್ಥಳವೇ ಎಂದು ಗೊತ್ತಿಲ್ಲ. ಸದರಿ ಸ.ಸಂಖ್ಯೆಗಳ ಮೂಲಕ ಕಾಲುದಾರಿ ಇದೆ ಎಂದರೆ ಆ ಸ.ಸಂಖ್ಯೆ ಅವರಿಗೆ ಸಂಬಂಧಪಟ್ಟಿದ್ದಲ್ಲ ಎಂದು ನುಡಿದಿರುತ್ತಾರೆ. ಸ.ನಂ.136/4, 136/5 ಮತ್ತು 136/6 ಗಳು ಪಂಚಾಯ್ತಿಗೆ ಸಂಬಂಧಪಟ್ಟಿದ್ದು. ಸ.ನಂ.136/4, 136/5 ಮತ್ತು 136/6 ಇದರಲ್ಲಿ ದಾರಿ ಇದೆ. ಈ ರಸ್ತೆಯಲ್ಲಿ ತಿರುಗಾಡಲು ವಾದಿ ಆತಂಕಪಡಿಸಿದ್ದಾರೆ. ಈ ಬಗ್ಗೆ ನಾನು ವಕೀಲರಿಗೆ ತಿಳಿಸಿಲ್ಲ. ಸ.ನಂ.136/4, 136/5 ಮತ್ತು 136/6 ಇದು ವಾದಿಯರಿಗೆ ಸೇರಿದ ಸ್ಥಳ, ಇದರಲ್ಲಿ ವಾದಿಯು ನಮಗೆ ಓಡಾಡಲು ಯಾವುದೇ ಕಾಲಕ್ಕೆ ಆತಂಕ ಮಾಡಿದ್ದು ಇಲ್ಲ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ಥಳ ಸ.ನಂ.135 ಇದು ವಾದಿಯ ಮಾಲ್ಕಿ ಹಕ್ಕಿನ ಜಾಗ, ಅದರಲ್ಲಿ ನಮ್ಮ ಮನೆಗೆ ಹೋಗುವ ಯಾವುದೇ ರಸ್ತೆ ಇಲ್ಲ ಎಂದರೆ ಸಾಕ್ಷಿಯು ಅನಾದಿಕಾಲದಿಂದಲೂ ರಸ್ತೆ ಇದೆ ಎಂದು ನುಡಿಯುತ್ತಾರೆ. ಈ ಬಗ್ಗೆ ನಾನು ಪಂಚಾಯ್ತಿಯ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಈ ರಸ್ತೆಗೆ ಪಂಚಾಯ್ತಿಯವರು ಹಣ ವಿನಿಯೋಗ ಮಾಡಿದ್ದಾರೆ. ಈ ಬಗ್ಗೆ ನಾನು ಪಂಚಾಯ್ತಿಯಿಂದ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಮ್ಮ ಮನೆಗೆ ಹೋಗುವ ರಸ್ತೆಗೆ ಪಂಚಾಯ್ತಿಯವರು ಯಾವುದೇ ಹಣ ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ಸ.ನಂ.136/4, 136/5 ಮತ್ತು 136/6 ಇದರಲ್ಲಿ ಒಂದು ರಸ್ತೆ ಇದ್ದರೂ ದಾವಾ ಸ್ಥಳದಲ್ಲಿ ಹೊಸದಾಗಿ ರಸ್ತೆ ಮಾಡಬೇಕೆಂದು ಪ್ರಯತ್ನಪಟ್ಟಿದ್ದೆನು ಎಂದರೆ ಸರಿಯಲ್ಲ. ಹಾಗೂ ರಸ್ತೆ ಮಾಡುವ ನೆಪದಲ್ಲಿ ವಾದಿಯರ ಕಬ್ಜಾ ಭೋಗವಟೆಗೆ ಆತಂಕಪಡಿಸಿದ್ದೇವೆ ಎಂದರೆ ಸರಿಯಲ್ಲ. ರಸ್ತೆ ಮಾಡುವ ನೆಪದಲ್ಲಿ ಅಲ್ಲಿರುವ ಗಿಡ-ಮರಗಳನ್ನು ನಾಶ ಮಾಡಿದ್ದೇವೆ ಎಂದರೆ ಸರಿಯಲ್ಲ. ನನಗೆ ದಾವಾ ರಸ್ತೆಯ ಹಾಗೂ ದಾವಾ ಸ್ಥಳದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಹಾಗೂ ಇಲ್ಲಿ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

**-Sd-**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾದಂ..**
**ಹೊನ್ನಾವರ.**